ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ: ಕಾಶಿಇ/ಮಾತಂವಿ/27/ಲ್ಯಾಪ್‌ಟಾಪ್/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 17.10.2017

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ಪಂಗಡದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಇ-ಕಂಟೆಟ್ ತುಂಬಿಸಿದ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 4 ಹೆಚ್‌ಪಿಸಿ 2017, ಬೆಂಗಳೂರು ದಿ. 18/02/2017, 21/03/2017, 27/03/2017.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/ಮಾತಂವಿ/42/ಲ್ಯಾಪ್‌ಟಾಪ್/16-17 ದಿನಾಂಕ:04/04/2017, 05/08/2017, 11/10/2017
3. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿ.11/10/2017

>>><<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ, ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಇ-ಕಂಟೆಟ್ ತುಂಬಿಸಿದ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಸಂಬಂಧದಲ್ಲಿ, ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು, ದಿ.11/10/2017 ರಿಂದ ದಿ:13/10/2017ರವರೆಗೆ ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸುವಂತೆ, ಈ ಬಗ್ಗೆ ಪ್ರತಿ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡುವಂತೆ ಮತ್ತು ದಿನಾಂಕ:14/10/2017 ರಂದು ದಾಖಲಾತಿಗಳನ್ನು ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪರಿಷ್ಕರಿಸಿ ಸಿದ್ಧಪಡಿಸಿಕೊಳ್ಳುವಂತೆ ಹಾಗೂ ಇಎಂಐಎಸ್ ತಂತ್ರಾಂಶದಲ್ಲಿ ನೀಡಲಾಗುವ 'ಲಿಂಕ್'ನಲ್ಲಿ ಸಿದ್ಧಪಡಿಸಿಟ್ಟುಕೊಂಡಿರುವ ಪರಿಷ್ಕೃತ ವಿದ್ಯಾರ್ಥಿಗಳ ಪಟ್ಟಿಯನುಸಾರವಾಗಿ ಮಾಹಿತಿಗಳನ್ನು 'ಅಪ್‌ಡೇಟ್' ಮಾಡುವಂತೆ ಪ್ರಾಂಶುಪಾಲರುಗಳಿಗೆ ಉಲ್ಲೇಖ(3)ರ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿದೆ.

ಇಎಂಐಎಸ್ ತಂತ್ರಾಂಶದಲ್ಲಿ 'ಅಪ್‌ಡೇಟ್' ಮಾಡಲಾಗಿರುವ ಮಾಹಿತಿಗಳನ್ನು ಸೇವ್ ಮಾಡಿಕೊಂಡು, ಎಕ್ಸೆಲ್‌ಗೆ ಎಕ್ಸ್‌ಪೋರ್ಟ ಮಾಡಿಕೊಂಡು, ಮೊದಲನೇ ಸೆಲ್‌ನಲ್ಲಿ ಕಾಲೇಜಿನ ಹೆಸರನ್ನು ನಮೂದಿಸಿ, ಪ್ರಿಂಟ್ ಪಡೆದು ಸಹಿ ಮಾಡಿ, ಸಹಿ ಮಾಡಿರುವ ಮಾಹಿತಿಯನ್ನು ಸ್ಕಾನ್ ಮಾಡಿ, ಪಿಡಿಎಫ್ ಆಗಿ ಸೇವ್ ಮಾಡಿ ಸದರಿ ಪಿಡಿಎಫ್ ಕಡತವನ್ನು dce.info2016@gmail.com ಇ-ಮೇಲ್ ವಿಳಾಸಕ್ಕೆ ರವಾನಿಸುವಂತೆ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸಹಿ ಮಾಡಲಾದ ಪ್ರತಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು,

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿಗಾಗಿ ಮತ್ತು ಕಾಲೇಜುಗಳಿಂದ ಸ್ವೀಕೃತವಾದ ವಿದ್ಯಾರ್ಥಿಗಳ ಧೃಢೀಕೃತ ಪಟ್ಟಿಯನ್ನು ದಿ.19/10/2017ರಂದು ಕೇಂದ್ರಕಛೇರಿಗೆ ಖುದ್ದಾಗಿ ಸಲ್ಲಿಸುವಂತೆ ಸೂಚಿಸಿದೆ.
2. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ-ಮಾಹಿತಿಗಾಗಿ
3. ಕಛೇರಿ ಪ್ರತಿ.

NO. 1, 2nd Floor, DTE Building, Palace Road, Bangalore - 560 001
Phone: 080 2226 3327, Fax: 080 2228 3758, email: bngcce@kar.nic.in

*circular laptop 2016-17 to* princi.docx